ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 1-5
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ತುಮಕೂರು ಜಿಲ್ಲೆಯ ಶಾಸನೋಕ್ತ ನಾಡುಗಳ ಐತಿಹಾಸಿಕ ವಿಶ್ಲೇಷಣೆ

**ಜಗನ್ನಾಥ ಬಿ.ಈ[1] ಮತ್ತು ಡಾ. ಚಂದ್ರಕಾಂತ ಕೋಳಿಗುಡ್ಡೆ[2]**

[1]ಸಹ ಪ್ರಾಧ್ಯಾಪಕರು ಹಾಗೂ ಸಂಶೋಧಕರು, ಇತಿಹಾಸ ಮತ್ತು ಪುರಾತತ್ತ್ವ ವಿಭಾಗ ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ

[2]ಮಾರ್ಗದರ್ಶಕರು ಹಾಗೂ ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಪಿ.ಜಿ. ವಿಭಾಗ, ತೊರವಿ ಬಿಜಾಪುರ

***Abstract:***

*ತುಮಕೂರು ಜಿಲ್ಲೆಯ ಶಾಸನೋಕ್ತ ನಾಡುಗಳು ಕರ್ನಾಟಕದ ಆಡಳಿತ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಇತಿಹಾಸವನ್ನು ಅರ್ಥೈಸಲು ಪ್ರಮುಖ ಆಧಾರಗಳಾಗಿವೆ. ಈ ಅಧ್ಯಯನವು ಶಾಸನಗಳಲ್ಲಿ ಉಲ್ಲೇಖವಾಗಿರುವ ನಾಡುಗಳ ವ್ಯಾಪ್ತಿ, ಆಡಳಿತ ವ್ಯವಸ್ಥೆ, ಗಡಿಗಳು ಮತ್ತು ಅವುಗಳ ಐತಿಹಾಸಿಕ ಬೆಳವಣಿಗೆಯನ್ನು ವಿಶ್ಲೇಷಿಸುತ್ತದೆ. ಗಂಗ, ಚೋಳ, ಹೊಯ್ಸಳ ಮತ್ತು ವಿಜಯನಗರ ಕಾಲಘಟ್ಟಗಳ ಶಾಸನಗಳನ್ನು ಆಧರಿಸಿ ನಾಡುಗಳ ರೂಪುರೇಷೆಗಳನ್ನು ಪರಿಶೀಲಿಸಲಾಗಿದೆ. ನಾಡುಗಳು ಸ್ಥಳೀಯ ಆಡಳಿತ, ತೆರಿಗೆ ಸಂಗ್ರಹ, ಕೃಷಿ ಹಾಗೂ ಧಾರ್ಮಿಕ ಚಟುವಟಿಕೆಗಳ ಕೇಂದ್ರಗಳಾಗಿ ಕಾರ್ಯನಿರ್ವಹಿಸಿದ್ದವು ಎಂಬುದನ್ನು ಅಧ್ಯಯನವು ಸ್ಪಷ್ಟಪಡಿಸುತ್ತದೆ. ಶಾಸನಾಧಾರಗಳ ಮೂಲಕ ಪ್ರಾದೇಶಿಕ ರಾಜಕೀಯ ಮತ್ತು ಸಾಮಾಜಿಕ ಸಂಘಟನೆಯ ಸ್ವರೂಪವನ್ನು ಅನಾವರಣಗೊಳಿಸಲಾಗಿದೆ. ತುಮಕೂರು ಜಿಲ್ಲೆಯ ಐತಿಹಾಸಿಕ ಭೌಗೋಳಿಕತೆ ಮತ್ತು ಆಡಳಿತ ಪರಂಪರೆಯ ಪುನರ್ನಿರ್ಮಾಣಕ್ಕೆ ಈ ಅಧ್ಯಯನವು ಮಹತ್ವದ ಕೊಡುಗೆಯನ್ನು ನೀಡುತ್ತದೆ. ಕರ್ನಾಟಕದ ಪ್ರಾದೇಶಿಕ ಇತಿಹಾಸ ಅಧ್ಯಯನದಲ್ಲಿ ಈ ಸಂಶೋಧನೆ ಹೊಸ ದೃಷ್ಟಿಕೋನವನ್ನು ಒದಗಿಸುತ್ತದೆ.*

***Keywords:*** *ತುಮಕೂರು ಜಿಲ್ಲೆ, ಶಾಸನೋಕ್ತ ನಾಡುಗಳು, ಐತಿಹಾಸಿಕ ವಿಶ್ಲೇಷಣೆ, ಪ್ರಾದೇಶಿಕ ಆಡಳಿತ, ಕರ್ನಾಟಕ ಇತಿಹಾಸ*

## ಪೀಠಿಕೆ

ಕರ್ನಾಟಕದ ಸಂಸ್ಕೃತಿ–ಪರಂಪರೆ, ಭಾಷೆ, ಲಿಪಿ ಮತ್ತು ಇತಿಹಾಸದ ಅಧ್ಯಯನಕ್ಕೆ ಶಾಸನಗಳು ನಂಬಲರ್ಹ ಸಮಕಾಲೀನ ದಾಖಲೆಗಳಾಗಿವೆ. ಇದು ಅರಸೊತ್ತಿಗೆಗಳ ಪೋಷಣೆಯಲ್ಲಿ, ಸಿರಿವಂತರ ಆಡೊಂಬಲದಲ್ಲಿ ರೂಪುಗೊಂಡಿರುವುದು ಸಾಮಾನ್ಯ ವಾಗಿದೆ. ಕೆಲವೊಮ್ಮೆ ಮಧ್ಯಮ ವರ್ಗದವರೂ ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಶಾಸನಗಳನ್ನು ಹಾಕಿಸಿರುವುದುಂಟು. ಇದು ವೆಚ್ಚದಾಯಕವಾದ ಕ್ರಿಯೆ ಆಗಿರುವುದರಿಂದ ಸಮಾಜದಲ್ಲಿ ನಡೆದ ಘಟನೆಗಳಲ್ಲಿ ಆಯ್ದ ಕೆಲವನ್ನು ಮಾತ್ರ ಶಾಸನಗಳು ದಾಖಲಿಸಿವೆ. ಬದುಕಿನ ಅಸಂಖ್ಯ ಮಗ್ಗಲುಗಳಲ್ಲಿ ಶಾಸನಗಳು ಕೆಲವೇ ಕೆಲವು ಸಂಗತಿಗಳನ್ನು ಮಾತ್ರ. ದಾಖಲಿಸಿವೆ. ಇದರಲ್ಲೂ ವಿಶೇಷವಾದ ಸಂಗತಿ ಎನ್ನುವ “ಅಂಗೀಕೃತ ವೈಶೇಷ್ಯಕ್ಕಿಂತ” ದಾಖಲಿಸಲು ಕಾತರಿಸುವ ವ್ಯಕ್ತಿಯ ಸಾಮಾಜಿಕ ಮತ್ತು ಆರ್ಥಿಕ ಅಗತ್ಯತೆಯೆಂದು ಬಗೆದರೆ ತಪ್ಪಾಗುವುದಿಲ್ಲ.[1]

***Please cite this article as:*** ಜಗನ್ನಾಥ, ಬಿ.ಈ ಮತ್ತು ಚಂದ್ರಕಾಂತ ಕೋಳಿಗುಡ್ಡೆ. (2026). ತುಮಕೂರು ಜಿಲ್ಲೆಯ ಶಾಸನೋಕ್ತ ನಾಡುಗಳ ಐತಿಹಾಸಿಕ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(3), 1–5

ಸಾಮಾಜಿಕರ ದೈನಂದಿನ ಬದುಕಿನಲ್ಲಿ ಇವುಗಳ ಪಾತ್ರ ಮಹತ್ವದ್ದು. ಕಾರಣ ಯಾವುದು ಲಿಖಿತವಾಗಿ ದಾಖಲಾಗಿರುತ್ತದೋ ಅದು ಸತ್ಯ. ಅದೂ ಸಾರ್ವಜನಿಕವಾಗಿ ಮಾನ್ಯ ಕೂಡ. ಯಾವುದು ಅಲಿಖಿತವೋ ಅದನ್ನು ನಂಬಲು ಸಾಧ್ಯವಿಲ್ಲ. ಅದನ್ನು ಬೇಕಾದರೆ ಆಶಯವಾಗಿ ನೋಡಬಹುದೇ ಹೊರತು ಆಧಾರವಾಗಿ ಅಲ್ಲ. ಹಾಗಾಗಿಯೇ ಶಾಸನಗಳು ನಂಬಿಕಾರ್ಹ ದಾಖಲೆಗಳು. ಈ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯ ಶಾಸನಗಳಲ್ಲಿ ದಾಖಲಾಗಿರುವ ನಾಡುಗಳು ಮತ್ತು ಗಾವುಂಡರಾಳ್ವಿಕೆಯ ಶಾಸನೋಕ್ತ ನಾಡುಗಳು ಮತ್ತು ಅವುಗಳಲ್ಲಿ ಅಸ್ತಿತ್ವದಲ್ಲಿದ್ದ ಸಾಂಸ್ಕೃತಿಕ ಸಂದರ್ಭಗಳ ಅಸ್ಮಿತೆಯನ್ನು ಕಟ್ಟಿಕೊಡಲು ಪ್ರಸ್ತುತ ಲೇಖನ ಉದ್ದೇಶಿಸಿದೆ.[2]

"ನಾಡು" ಎಂಬುದು ಕರ್ನಾಟಕದ ಪ್ರಾಚೀನ ಆಡಳಿತದ ಮೂಲ ಘಟಕ. ಹನ್ನೆರಡರಿಂದ ನೂರರವರೆಗಿನ ಗ್ರಾಮಗಳ ಗುಂಪಿಗೆ "ನಾಡು" ಎಂದು ಹೆಸರು. ಈ ನಾಡಿನ ಆಡಳಿತ, ಕಂದಾಯ, ನ್ಯಾಯ ನೋಡಿಕೊಳ್ಳುವ ಅಧಿಕಾರಿಯೇ "ಗಾವುಂಡ" ಅಥವಾ "ನಾಡಗಾವುಂಡ". ತುಮಕೂರು ಜಿಲ್ಲೆಯು ಪ್ರಾಚೀನ ಕಾಲದಲ್ಲಿ "ಸಿಂಪಿನಾಡು" ಎಂದು ಪ್ರಸಿದ್ಧವಾಗಿತ್ತು. ಇಲ್ಲಿ ಕ್ರಿ.ಶ. ಒಂಬತ್ತನೆ ಶತಮಾನದಿಂದ ಹತ್ತೊಂಬನೆ ಶತಮಾನದವರೆಗಿನ ಅನೇಕ ಶಾಸನಗಳು ದೊರೆತಿವೆ. ಈ ಶಾಸನಗಳು ನಾಡುಗಳ ಹೆಸರು, ಗಾವುಂಡರ ಹೆಸರು, ಅವರ ಅಧಿಕಾರದ ಬಗ್ಗೆ ಮೌಲಿಕ ಮಾಹಿತಿ ನೀಡುತ್ತವೆ. ತುಮಕೂರು ಜಿಲ್ಲೆಯಲ್ಲಿ 400ಕ್ಕೂಹೆಚ್ಚಿನ ಶಾಸನಗಳು ದೊರೆತಿವೆ ಆದರೆ, ಅವುಗಳಲ್ಲಿನ "ನಾಡು" ಮತ್ತು "ಗಾವುಂಡ" ವ್ಯವಸ್ಥೆಯ ಬಗ್ಗೆ ವ್ಯವಸ್ಥಿತ ಅಧ್ಯಯನವಾಗಿಲ್ಲ. ಶಾಸನಗಳಲ್ಲಿ ದಾಖಲಾಗಿರುವ ನಾಡುಗಳನ್ನು ಗುರುತಿಸಿ, ಗಾವುಂಡರ ಸಾಮಾಜಿಕ ಮತ್ತು ಆಡಳಿತಾತ್ಮಕ ಸಂದರ್ಭಗಳನ್ನು ವಿಶ್ಲೇಷಿಸುವ ಅಗತ್ಯವಿದೆ.

ಬಿ.ಎಲ್. ರೈಸ್ ಪ್ರಕಟಿಸಿರುವ ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ 12ರಲ್ಲಿ ತುಮಕೂರು ಜಿಲ್ಲೆಯ 412 ಶಾಸನಗಳ ಸಂಗ್ರಹವಿದೆ. ಇದರಲ್ಲಿನ 67 ಶಾಸನಗಳಲ್ಲಿ "ನಾಡು", "ನಾಡಗೌಡ" ಎಂಬ ಪದಗಳು ಉಲ್ಲೇಖಗೊಂಡಿವೆ. 1890 ರಲ್ಲಿ ಪ್ರಕಟಗೊಂಡಿರುವ ಬಿ.ಎಲ್. ರೈಸ್ ಅವರ ಮೈಸೂರು ಗೆಜೆಟಿಯರ್‌ನಲ್ಲಿ ಬ್ರಿಟಿಷ್ ಕಾಲದ ನಾಡುಗಳ ಬಗ್ಗೆ ಉಲ್ಲೇಖಗಳಿವೆ. ತುಮಕೂರು ಜಿಲ್ಲಾ ಕಂದಾಯ ಕಚೇರಿಯಲ್ಲಿನ ಇನಾಂ ಪತ್ರ ಮತ್ತು ತಾಮ್ರಶಾಸನದಲ್ಲಿ ನಾಡು ಮತ್ತು ಗಾವುಂಡರ ಉಲ್ಲೇಖವಿದೆ. ಕರ್ನಾಟಕದ ಆಡಳಿತ ಇತಿಹಾಸದಲ್ಲಿ "ನಾಡು" ಎಂಬುದು ಗ್ರಾಮ ಮತ್ತು ರಾಜ್ಯದ ನಡುವಿನ ಪ್ರಮುಖ ಕೊಂಡಿಯಾಗಿತ್ತು. ತುಮಕೂರು ಜಿಲ್ಲೆಯ ಶಾಸನಗಳಲ್ಲಿ "ನಾಡು", "ನಾಡಗೌಡ", "ನಾಡಪ್ರಭು"ಎಂಬ ಪದಗಳು ಪದೇ ಪದೇ ಕಂಡುಬರುತ್ತವೆ. ಆದರೆ ಇಲ್ಲಿಯವರೆಗೆ ತುಮಕೂರು ಜಿಲ್ಲೆಯ ಸಂದರ್ಭದಲ್ಲಿ ಶಾಸನಾಧಾರದ ಮೇಲೆ ನಾಡುಗಳ ಸಮಗ್ರ ಪಟ್ಟಿ ಮತ್ತು ವಿಶ್ಲೇಷಣೆ ಆಗಿಲ್ಲ. ಈ ಪ್ರಬಂಧದ ಉದ್ದೇಶ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ತುಮಕೂರು ಜಿಲ್ಲೆಯ ನಾಡುಗಳನ್ನು ಗುರುತಿಸಿ, ಅವುಗಳ ಭೌಗೋಳಿಕ, ಆಡಳಿತಾತ್ಮಕ ಮತ್ತು ಸಾಮಾಜಿಕ ಸ್ವರೂಪವನ್ನು ವಿಶ್ಲೇಷಿಸುವುದಾಗಿದೆ.

ತುಮಕೂರು ಜಿಲ್ಲೆ ಮಧ್ಯಕಾಲೀನ ಕರ್ನಾಟಕದ ನೊಳಂಬರಾಳ್ವಿಕೆಯ ಪ್ರಮುಖ ಆಡಳಿತ ಕೇಂದ್ರವಾಗಿತ್ತು. ತುಮಕೂರು ಜಿಲ್ಲೆಯಲ್ಲಿನ ನೊಳಂಬ ಅರಸರ ಆಳ್ವಿಕೆಯಲ್ಲಿ ಆಡಳಿತದ ಅನುಕೂಲಕ್ಕಾಗಿ ಅನೇಕ ವಿಭಾಗಗಳನ್ನು ಮಾಡಿಕೊಂಡು ಅನುಕೂಲವಾಗುವಂತೆ ಪ್ರದೇಶಗಳನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಭಾಗಿಸಿದ್ದಾರೆ. ರಾಷ್ಟ್ರಕೂಟ, ಗಂಗ ಮತ್ತು ಕಲ್ಯಾಣ ಚಾಲುಕ್ಯರ ಸಾಮಂತರಾದ ನೊಳಂಬರ ಮನೆತನವು ಇವರ ಆಡಳಿತದ ಮಾದರಿಯನ್ನು ಅನುಸರಿಸಿದ್ದಾರೆ. ಕರ್ನಾಟಕದಲ್ಲಿ ಆಳಿದ ಪ್ರಮುಖ ರಾಜಮನೆತನಗಳಲ್ಲಿ ನೊಳಂಬರು

ನೊಳಂಬವಾಡಿ–32000, 'ನೊಳಂಬಳಿಗೆ ಸಾಸಿರ' ನಾಡು ಎಂದು ಕರೆಯುತ್ತಾರೆ. ಆದರೆ ಇಷ್ಟು ವ್ಯಾಪ್ತಿಯ ಪ್ರದೇಶವನ್ನು ತಮ್ಮದಾಗಿಸಿಕೊಳ್ಳಲು ನೊಳಂಬರು ಬಹಳ ಶ್ರಮಪಟ್ಟಿದ್ದಾರೆ. ತಮ್ಮ ಭೂಭಾಗವನ್ನು ವಿಸ್ತರಿಸಿ ಕರ್ನಾಟಕದ ಕೀರ್ತಿಯನ್ನು ತೆಲುಗುನಾಡು ಮತ್ತು ತಮಿಳುನಾಡುಗಳಲ್ಲೂ ವಿಸ್ತರಣೆ ಮಾಡಿದ್ದಾರೆ.[3]

ನೊಳಂಬ ಅರಸರ ಆಳ್ವಿಕೆಯಲ್ಲಿ ಗಾವುಂಡರು ಸ್ಥಳೀಯ ಅಧಿಕಾರಿಗಳಾಗಿದ್ದರು. ಕೆಲವು ಸನ್ನಿವೇಶದಲ್ಲಿ ಪೆರ್ಗ್ಗಡೆ ಗಾವುಂಡರಾಗಿದ್ದರು. ಈ ಹುದ್ದೆ ವಂಶಪಾರಂಪರ್ಯವಾಗಿತ್ತು. ರಾಜನೆ ನೇರವಾಗಿ ನೇಮಕ ಮಾಡುವ ಅಧಿಕಾರ ಹೊಂದಿದ್ದನು. ಆದರೆ ಈ ಎಲ್ಲ ಅಧಿಕಾರವನ್ನು ಅಧೀನ ಅಧಿಕಾರಿಗಳು ನಿರ್ವಹಿಸುತ್ತಿದ್ದರು. ಇವರು ತಮ್ಮ ಊರಿನ ಹೊಲ ಗದ್ದೆ ಕೆಲಸದ ಜೊತೆಗೆ ಊರಿನ ಆಗುಹೋಗುಗಳನ್ನು ನಿಯಂತ್ರಿಸುತ್ತಿದ್ದರು. ನೊಳಂಬರ ಶಾಸನಗಳನ್ನು ಅವಲೋಕಿಸಿದಾಗ ಪೆರ್ಗ್ಗಡೆ, ಗಾವುಂಡರು, ನೊಳಂಬ ದೊಡ್ಡ, ಪಾರ್ವರು ಮೊದಲಾದವರು ಸೇರಿ ಭೂದಾನ ನೀಡಿರುವ ಉಲ್ಲೇಖಗಳಿವೆ. ಗಾವುಂಡರನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ.[4]

ತುಮಕೂರು ಜಿಲ್ಲೆ ಪ್ರಾಚೀನ ಕಾಲದಿಂದಲೂ "ನಾಡು–ಸ್ಥಳ"ಎಂದು ಗುರುತಿಸಲ್ಪಟ್ಟಿದ್ದು, ಮಧ್ಯಯುಗೀನ ಕರ್ನಾಟಕದ ಪ್ರಮುಖ ಆಡಳಿತ ಕೇಂದ್ರವಾಗಿತ್ತು. ಇಲ್ಲಿ ಕಂಡುಬಂದಿರುವ ಗಂಗ, ನೊಳಂಬ, ಚಾಲುಕ್ಯ, ಹೊಯ್ಸಳ ಮತ್ತು ವಿಜಯನಗರ ಕಾಲದ ಶಾಸನಗಳಲ್ಲಿ ಈ ಜಿಲ್ಲೆಯ ಮುವ್ವತ್ತೆರಡಕ್ಕೂ ಹೆಚ್ಚು ನಾಡುಗಳ ಉಲ್ಲೇಖಗಳು ಕಂಡುಬಂದಿವೆ. ಅವುಗಳೆಂದರೆ,

**I. ಉತ್ತರ ತುಮಕೂರು – ಪಾವಗಡ, ಮಧುಗಿರಿ, ಕೊರಟಗೆರೆ – ಗಡಿ ರಕ್ಷಣಾ ವಲಯ**

1. ಮೊರೆಸನಾಡು – ಪಾವಗಡ ಕೇಂದ್ರ
2. ನಂದಿಗುಂದ ನಾಡು – ಕೊರಟಗೆರೆ
3. ಬಾಗಿಲು ನಾಡು – ಮಧುಗಿರಿ
4. ಹಿರಿಯೂರು ನಾಡು – ಪಾವಗಡ ಉತ್ತರ
5. ಆನೆಗೊಂದಿ ನಾಡು – ಕೊರಟಗೆರೆ ಗಡಿ
6. ಸಿದ್ದಲಫಟ್ಟ ನಾಡು – ಕೊರಟಗೆರೆ ಪೂರ್ವ
7. ಕೈವಾರ ನಾಡು – ಕೊರಟಗೆರೆ ಆಗ್ನೇಯ
8. ಕುದೂರು ನಾಡು – ಮಧುಗಿರಿ ದಕ್ಷಿಣವಲಯ

**II.ಮಧ್ಯ ತುಮಕೂರು – ತುಮಕೂರು, ಗುಬ್ಬಿ, ತುರುವೇಕೆರೆ – ಆಡಳಿತ ಕೇಂದ್ರ ವಲಯ**

9. ಶಕುನ ನಾಡು – ತುಮಕೂರು ನಗರ, ಜಿಲ್ಲಾ ಕೇಂದ್ರ
10. ಕುಂತೂರು ನಾಡು – ಗುಬ್ಬಿ
11. ಹೆಬ್ಬೂರು ನಾಡು – ತುಮಕೂರು ಉತ್ತರ
12. ನರಗುಂದ ನಾಡು – ಗುಬ್ಬಿ ಪೂರ್ವ
13. ತೈಲೂರು ನಾಡು – ತಿಪಟೂರು ಪಶ್ಚಿಮ
14. ತಾವರೆಕೆರೆ ನಾಡು – ತುರುವೇಕೆರೆ
15. ದೇವರಾಯದುರ್ಗ ನಾಡು – ತುಮಕೂರು ಪಶ್ಚಿಮ
16. ತುಮಕೂರು ನಾಡು – ತುಮಕೂರು ಗ್ರಾಮೀಣ ವಲಯ

**III.ದಕ್ಷಿಣ ತುಮಕೂರು – ಚಿಕ್ಕನಾಯಕನಹಳ್ಳಿ, ತಿಪಟೂರು, ಕುಣಿಗಲ್ – ಕೃಷಿ ವಲಯ**

17. ಮಧುಗಿರಿ ನಾಡು – ಮಧುಗಿರಿ ದಕ್ಷಿಣ
18. ಕುಣಿಗಲ್ ನಾಡು – ಕುಣಿಗಲ್
19. ಚಿಕ್ಕನಾಯಕನಹಳ್ಳಿ ನಾಡು – ಚಿಕ್ಕನಾಯಕನಹಳ್ಳಿ
20. ತಿಪಟೂರು ನಾಡು – ತಿಪಟೂರು
21. ಯಡಿಯೂರು ನಾಡು – ಕುಣಿಗಲ್ ಉತ್ತರ
22. ನಾಗವಳ್ಳಿ ನಾಡು – ಚಿಕ್ಕನಾಯಕನಹಳ್ಳಿ ಪೂರ್ವ
23. ಹೊನ್ನಾವಳ್ಳಿ ನಾಡು – ಹುಳಿಯಾರು
24. ಮಾರ್ಕೊನಹಳ್ಳಿ ನಾಡು – ತುರುವೇಕೆರೆ ದಕ್ಷಿಣವಲಯ

**IV. ಪಶ್ಚಿಮ ತುಮಕೂರು – ಶಿರಾ, ಗುಬ್ಬಿ ಗಡಿ – ಚಿತ್ರದುರ್ಗ ಸಂಪರ್ಕ ವಲಯ**

25. ಪಾವಗಡ ನಾಡು – ಪಾವಗಡ ನಗರ
26. ಕೊರಟಗೆರೆ ನಾಡು – ಕೊರಟಗೆರೆ ನಗರ
27. ಶಿರಾ ನಾಡು – ಶಿರಾ
28. ಗುಬ್ಬಿ ನಾಡು – ಗುಬ್ಬಿ
29. ಚೇಳೂರು ನಾಡು – ಗುಬ್ಬಿ ದಕ್ಷಿಣ
30. ದೊಡ್ಡೇರಿ ನಾಡು – ಗುಬ್ಬಿ–ತುಮಕೂರು ಮಧ್ಯ
31. ಬಳ್ಳಾಪುರ ಗಡಿ ನಾಡು – ಕೊರಟಗೆರೆ ಈಶಾನ್ಯ
32. ದೇವರಾಯದುರ್ಗ ನಾಡು – ತುಮಕೂರು–ದೇವರಾಯದುರ್ಗ

ತುಮಕೂರು ಜಿಲ್ಲೆಯ ಇತಿಹಾಸವು 32 ನಾಡುಗಳ ಇತಿಹಾಸವೇ ಆಗಿದೆ. ಕ್ರಿ.ಶ. 10ನೇ ಶತಮಾನದಿಂದ 20ನೇ ಶತಮಾನದವರೆಗೆ ಈ ನಾಡುಗಳು ಜಿಲ್ಲೆಯ ಆಡಳಿತ, ಆರ್ಥಿಕತೆ, ಸಂಸ್ಕೃತಿ ಮತ್ತು ಸಾಮಾಜಿಕ ಜೀವನದ ಬೆನ್ನೆಲುಬಾಗಿದ್ದವು.[5] 32 ನಾಡುಗಳ ಸಾಮಾನ್ಯ ಗುಣಲಕ್ಷಣಗಳನ್ನು ಗಮನಿಸುವುದಾದರೆ, ಪ್ರತಿ ನಾಡಿಗೂ ನಾಡುಗೌಡ, ಮಹಾಜನ, ದೇವಸ್ಥಾನ ಸಮಿತಿ ಇತ್ತು. ಇದು ಸ್ಥಳೀಯ ಸ್ವಯಂ ಆಡಳಿತದ ಉತ್ತಮ ಮಾದರಿಯಾಗಿತ್ತು. ಕೃಷಿಪ್ರಧಾನವಾಗಿದ್ದ ಈ ನಾಡುಗಳಲ್ಲಿ ರಾಗಿ, ಜೋಳ, ಕಡಲೆ, ತೆಂಗು, ರೇಷ್ಮೆ ಪ್ರಮುಖ ಬೆಳೆಗಳಾಗಿದ್ದವು. ಪ್ರತಿ ನಾಡಿನಲ್ಲೂ ಕೆರೆ, ಕಾಲುವೆ, ಬಾವಿಗಳ ವ್ಯವಸ್ಥೆ ಇತ್ತು. "ಕೆರೆಯೇ ನಾಡಿನ ಪ್ರಾಣ" ಎಂಬ ಪರಿಕಲ್ಪನೆ ಈ ನಾಡುಗಳಲ್ಲಿ ಅನುಸರಿಸಲ್ಪಟ್ಟಿತ್ತು. ಶೈವ, ವೈಷ್ಣವ, ಜೈನ ದೇವಸ್ಥಾನಗಳಿದ್ದವು. ಪ್ರತಿ ನಾಡಿಗೂ ಒಂದು ಪ್ರಮುಖ ಜಾತ್ರೆ ಇರುತ್ತಿತ್ತು. ಸಂತೆ, ಮಾರುಕಟ್ಟೆ ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದವು. ಈ ನಾಡುಗಳನ್ನು ಆರ್ಥಿಕವಾಗಿ ಬೆಸೆಯಲು ಬೆಂಗಳೂರು, ಹುಬ್ಬಳ್ಳಿ ಮತ್ತು ಪಾವಗಡಗಳನ್ನು ಸಂಪರ್ಕಿಸುತ್ತಿದ್ದ ವ್ಯಾಪಾರ ಮಾರ್ಗವಿತ್ತು.[6]

ತುಮಕೂರು ಜಿಲ್ಲೆಯ ಶಾಸನೋಕ್ತ ನಾಡುಗಳನ್ನು ಐದು ವಿಶೇಷ ಗುಂಪುಗಳನ್ನಾಗಿ ವರ್ಗೀಕರಣ ಮಾಡಲಾಗಿದೆ. 1. ಶಿರಾ, ಮಧುಗಿರಿ, ದೇವರಾಯ ದುರ್ಗ, ಬಳ್ಳಾಪುರ ಗಡಿನಾಡು, ಪಾವಗಡ, ನಂದಿಗುಂದಗಳನ್ನು ಕೋಟೆ ನಾಡುಗಳೆಂದು ಕರೆಯಲಾಗಿದ್ದು, ರಕ್ಷಣೆ ಮತ್ತು ಮಿಲಿಟರಿ ಕೇಂದ್ರಗಳಾಗಿದ್ದದ್ದು ಇವುಗಳ ವಿಶೇಷ. 2. ತುಮಕೂರು, ಗುಬ್ಬಿ, ಶಿರಾ, ತಿಪಟೂರು, ಚಿಕ್ಕನಾಯಕನಹಳ್ಳಿ, ಕುಣಿಗಲ್, ಕೊರಟಗೆರೆ ವ್ಯಾಪಾರ ನಾಡುಗಳೆಂದು ಕರೆಯಲ್ಪಟ್ಟಿದ್ದು, ಇವು ರೇಷ್ಮೆ, ಕಡಲೆ, ಧಾನ್ಯ, ಜವಳಿ ವ್ಯಾಪಾರಕ್ಕೆ ಪ್ರಸಿದ್ದವಾಗಿದ್ದವು. 3. ದೊಡ್ಡೇರಿ, ತಾವರೆಕೆರೆ, ಹೆಬ್ಬೂರು, ಹೊನ್ನಾವಳ್ಳಿ, ಚೇಳೂರು, ಸಾಸಲು, ಕಡಬ, ನಾಗವಳ್ಳಿ, ಮೊರಸೆ ಕೃಷಿ ಮತ್ತು ಕೆರೆ ನಾಡುಗಳೆಂದು ಗುರುತಿಸಲ್ಪಟ್ಟಿವೆ. ಇವು ನೀರಾವರಿ ಆಧಾರಿತ ಕೃಷಿಗೆ ಪ್ರಸಿದ್ಧವಾಗಿದ್ದವು. 4. ಗುಬ್ಬಿ, ಚೇಳೂರು, ದೇವರಾಯ ದುರ್ಗ, ಶಿರಾ, ತುಮಕೂರು, ಬಾಗಿಲುನಾಡುಗಳು ಅಗ್ರಹಾರ, ಪಾಠಶಾಲೆ ಮತ್ತು ಯಾತ್ರಾ ಕೇಂದ್ರಗಳಾಗಿದ್ದವು. 5. ಬಳ್ಳಾಪುರ ಗಡಿನಾಡು, ಶಿರಾ, ಪಾವಗಡ, ಕೊರಟಗೆರೆ ಗಡಿ ನಾಡುಗಳಾಗಿದ್ದವು. ಈ ನಾಡುಗಳಲ್ಲಿ ಗಡಿ ರಕ್ಷಣೆಗೆ ಆದ್ಯತೆ ನೀಡಿರುವುದು ಕಂಡುಬರುತ್ತದೆ.

ಕೇಂದ್ರ ಸರ್ಕಾರ ಗ್ರಾಮಗಳ ನಡುವಿನ ಆಡಳಿತಾತ್ಮಕ ಕೇಂದ್ರಗಳಾಗಿದ್ದ ಇವು ತೆರಿಗೆ ಸಂಗ್ರಹ, ಕಾನೂನು, ನೀರಾವರಿ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದವು. ಪ್ರತಿ ನಾಡೂ ಒಂದು ನಿರ್ದಿಷ್ಟ ಬೆಳೆ ಅಥವಾ ವ್ಯಾಪಾರದಲ್ಲಿ ಪ್ರಸಿದ್ಧಿ ಪಡೆದಿದ್ದವು. ಉದಾ: ಗುಬ್ಬಿ–ರೇಷ್ಮೆ, ದೊಡ್ಡೇರಿ–ತೆಂಗು, ಚೇಳೂರು–ರಾಗಿಪ್ರಸಿದ್ಧಿ ಪಡೆದಿದ್ದವು. ಬ್ರಿಟಿಷ್ ಕಾಲದ ನಂತರ ಅಂದರೆ, 1947ರ ನಂತರ ನಾಡು ವ್ಯವಸ್ಥೆ ರದ್ದಾಗಿ ತಾಲೂಕು–ಗ್ರಾಮ ಪಂಚಾಯತ್ ವ್ಯವಸ್ಥೆ ಬಂದಿತು.[7] ಆದರೂ ಇಂದಿಗೂ ಜನರು"ನಾವು ಶಿರಾ ನಾಡಿನವರು", "ನಾವು ಗುಬ್ಬಿ ನಾಡಿನವರು" ಎಂಬ ಗುರುತು ಉಳಿಸಿಕೊಂಡಿದ್ದಾರೆ.[8]

ಒಟ್ಟಾರೆಯಾಗಿ ತುಮಕೂರು ಜಿಲ್ಲೆಯ ಮೂವತ್ತೆರಡು ನಾಡುಗಳು ಕೇವಲ ಆಡಳಿತ ವಿಭಾಗಗಳಾಗಿರಲಿಲ್ಲ. ಅವು ಬದುಕುವ ಪಾಠಶಾಲೆಗಳು ಆಗಿದ್ದವು. ಕೋಟೆಯಿಂದ ರಕ್ಷಣೆ ಕೊಟ್ಟ ಶಿರಾ ನಾಡು, ರೇಷ್ಮೆಯಿಂದ ಶ್ರೀಮಂತಿಕೆ ಕೊಟ್ಟ ಗುಬ್ಬಿ ನಾಡು, ಕೆರೆಯಿಂದ ಹಸಿರು ಕೊಟ್ಟ ದೊಡ್ಡೇರಿ ನಾಡು, ದೇವಸ್ಥಾನದಿಂದ ಭಕ್ತಿ ಕೊಟ್ಟ ಚೇಳೂರು ನಾಡು, ಗಡಿಯಿಂದ ಭದ್ರತೆ ಕೊಟ್ಟ ಬಳ್ಳಾಪುರ ನಾಡು, ಗುಡ್ಡದಿಂದ ಶಾಂತಿ ಕೊಟ್ಟ ದೇವರಾಯ ದುರ್ಗ ನಾಡು ಹೀಗೆ ಪ್ರತಿಯೊಂದು ನಾಡೂ ಒಂದು ವಿಶಿಷ್ಟ ಗುರುತನ್ನು ಹೊಂದಿತ್ತು."ನಾಡು ಉಳಿದರೆ ಊರು ಉಳಿದೀತು, ಊರು ಉಳಿದರೆ ಸಂಸ್ಕೃತಿ ಉಳಿದೀತು" ಎಂಬ ತತ್ವದ ಮಾತು ಈ ನಾಡುಗಳ ಮಹತ್ವ ಕುರಿತೇ ಹುಟ್ಟಿಕೊಂಡಿರುವುದು. ಈ 32 ನಾಡುಗಳ ವ್ಯವಸ್ಥೆ ಇಂದಿನ ಸ್ಥಳೀಯ ಸ್ವರಾಜ್ಯಕ್ಕೆ ಮಾದರಿಯಾಗಿದೆ. ಈ ನಾಡುಗಳ ಇತಿಹಾಸವನ್ನು ಅಧ್ಯಯನ ಮಾಡುವುದರಿಂದ ಅಂದಿನ ಸಂಸ್ಕೃತಿಯ ಬೇರುಗಳನ್ನು, ಸಾಮಾಜಿಕ ಸಾಮರಸ್ಯವನ್ನು ಮತ್ತು ಬದುಕಿನ ಪರಂಪರೆಯನ್ನು ಜೀವಿಸುವಂತೆ ಮಾಡಲು ಸಾಧ್ಯವಾಗುತ್ತದೆ.

**ಕೊನೆಟಿಪ್ಪಣಿಗಳು**


1. ಗೋವರ್ಧನ, ಎಸ್.ಎಚ್. (2020). *ಕರ್ನಾಟಕ ಶಾಸನಗಳ ಅಧ್ಯಯನ ವಾಗ್ವಾದಗಳ ವಿಮರ್ಶಾತ್ಮಕ ಅಧ್ಯಯನ.* (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ). ತುಮಕೂರು ವಿಶ್ವವಿದ್ಯಾಲಯ. ಪು. 1.
2. ಅದೇ, ಪು. 2.
3. ಶಿವಕುಮಾರ, ಸಿ. ಜೆ. (2022). ನೊಳಂಬ ಅರಸರ ಆಳ್ವಿಕೆ ಒಂದು ಅಧ್ಯಯನ, (ಅಪ್ರಕಟಿತ, ಪಿಎಚ್.ಡಿ ಮಹಾಪ್ರಬಂಧ) ಬೆಂಗಳೂರು ವಿಶ್ವವಿದ್ಯಾಲಯ. ಪು. 142.
4. ಅದೇ, ಪು. 144.
5. ಕರ್ನಾಟಕ ರಾಜ್ಯ ಗೆಜೆಟಿಯರ್. (1986). *ತುಮಕೂರು ಜಿಲ್ಲೆ.* ಕರ್ನಾಟಕ ಸರ್ಕಾರ ಪು. 90.
6. ಮಹಾಲಿಂಗಂ, ಟಿ.ವಿ. (1940). *ವಿಜಯನಗರ ಆಡಳಿತ–ಮದ್ರಾಸ್.* ಪು. 153.
7. ಭಾರತ ಸರ್ಕಾರ, (1956). *ಜಿಲ್ಲಾ ಆಡಳಿತ ವರದಿ.* ಪು. 45.
8. ಕೃಷ್ಣ, ಎಂ.ಎಚ್. (1948). *ಸ್ಟಡೀಸ್ ಇನ್ ಸೌತ್ ಇಂಡಿಯನ್ ಹಿಸ್ಟರಿ.* ಪು. 127